Code No.: **216 NS**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

Malleshwaram, Bengaluru–560003.

## ಕರ್ನಾಟಕ ಮುಕ್ತ ಶಾಲೆ ಪರೀಕ್ಷೆ, ಮೇ- 2024

## Karnataka Open School Examination, May - 2024

**MODEL QUESTION PAPER / ಮಾದರಿ ಪ್ರಶ್ನೆ ಪತ್ರಿಕೆ**

| | | |
|---|---|---|
| Subject / ವಿಷಯ | : | **HOME SCIENCE**<br>**ಗೃಹ ವಿಜ್ಞಾನ** |
| Maximum Marks / ಗರಿಷ್ಠ ಅಂಕಗಳು | : | 100 |
| Duration of Exam / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| Time allotted to read the instructions / ಸೂಚನೆಗಳನ್ನು ಓದಲು ನಿಗಧಿಗೊಳಿಸಿರುವ ಅವಧಿ | : | 15 minutes / 15 ನಿಮಿಷಗಳು |

**ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / *General Instructions to the Candidates:***

1. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ–ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯ ತಕ್ಕದ್ದು.

   Candidate should write their Register Number on the Answer Booklet as printed in their hall ticket.

2. ಅಭ್ಯರ್ಥಿಯು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ–ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.

   Candidate should write their Main Answer Booklet Number on the additional answer sheets in the space provided.

3. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ–ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ–ಪುಸ್ತಿಕೆಯನ್ನು ಮೌಲ್ಯ ಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.

4. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ–ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidate found to be indulged in malpractice during examination and violating examination instructions, action will be taken against such candidate as per the examination rules and his/her answer booklet will not be considered for evaluation.

5. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.

   Use black / blue ball point pen only to write the answers.

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **$5 \times 1 = 5$**

**1) ಈ ಕೆಳಗಿನ ಯಾವ ಜೀವಸತ್ವದ ಕೊರತೆಯಿಂದ ಸ್ಕರ್ವಿರೋಗ ಉಂಟಾಗುತ್ತದೆ.**

A) ಜೀವಸತ್ವ–A

B) ಜೀವಸತ್ವ–B

C) ಜೀವಸತ್ವ–C

D) ಅಯೋಡಿನ್

**2) ಕೆನೆರಹಿತ ಹಾಲಿನಲ್ಲಿ ಅಭಾವವಿರುವ ಪೋಷಕಾಂಶಗಳು.**

A) ಸುಣ್ಣ

B) ಕೊಬ್ಬು

C) ಸಸಾರಜನಕ

D) ಜೀವಸತ್ವ–$B_2$

**3) ಈ ಕೆಳಗಿನ ಯಾವ ಬಟ್ಟೆ ಬೇಸಿಗೆಯಲ್ಲಿ ಧರಿಸಲು ಅತ್ಯಂತ ಸೂಕ್ತ.**

A) ಹತ್ತಿ

B) ರೇಷ್ಮೆ

C) ನೈಲಾನ್

D) ಟೆರಿಲೀನ್

**4) ರೇಷ್ಮೆ ಬಟ್ಟೆಯ ಮೇಲೆ ಬೆಣ್ಣೆಯ ಹೊಸ ಕಲೆ ತೆಗೆಯಲು ಬಳಸುವ ಸೂಕ್ತ ವಿಧಾನ.**

A) ತಣ್ಣೀರಿನಿಂದ ಒಗೆಯುವುದು.

B) ತಣ್ಣೀರು ಮತ್ತು ಸೋಪಿನಿಂದ ಒಗೆಯುವುದು.

C) ಉಪ್ಪನ್ನು ಹಾಕಿ ಸೂರ್ಯನ ಬಿಸಿಲಿನಲ್ಲಿಡುವುದು.

D) ಬೆಚ್ಚಗಿನ ನೀರಿನಲ್ಲಿ ಸೋಪು ಹಾಕಿ ಒಗೆಯುವುದು.

**5) ಪ್ರತಿನಿತ್ಯದ ಸ್ವಚ್ಛತೆಗೆ ಸಂಬಂಧಿಸಿದಂತೆ ಸೂಕ್ತವಾದ ವಾಕ್ಯ.**

A) ದೀಪಾವಳಿ ಹಬ್ಬಕ್ಕೆ ಮುಂಚೆ ಸ್ವಚ್ಛತೆ.

B) ನೆಲವನ್ನು ಗುಡಿಸುವುದು ಮತ್ತು ಒರೆಸುವುದು.

C) ಬಾಗಿಲಿನ ಹಿಡಿಗಳನ್ನು ಸ್ವಚ್ಛಗೊಳಿಸುವುದು.

D) ಮರದ ಸಾಮಾನುಗಳನ್ನು ಸ್ವಚ್ಛಗೊಳಿಸುವುದು.

**II. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿ. 5×1=5**

6) ನೀಲಿ ಬಣ್ಣ ____________ ಬಣ್ಣಕ್ಕೆ ಉದಾಹರಣೆಯಾಗಿದೆ.

7) ನಾವು ಸಾಧಿಸಬೇಕಾದ ಲಕ್ಷ್ಯಕ್ಕೆ ____________ ಎಂದು ಹೇಳಬಹುದು.

8) ಅನೇಕ ವಿದ್ಯುತ್ ಉಪಕರಣಗಳನ್ನು ಒಂದೆ ____________ ಹಾಕಬೇಡಿ.

9) ಆಲೂಗೆಡ್ಡೆ ____________ ಗೆ ಸಂಪನ್ಮೂಲವಾಗಿದೆ.

10) ____________ ಎಂದರೆ ಅಹಿತಕರವಾದ ಶಬ್ದ.

III. ಕೆಳಗಿನ ‘A’ ಪಟ್ಟಿಯನ್ನು ‘B’ ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ. **4×1=4**

| ‘A’ ಪಟ್ಟಿ | ‘B’ ಪಟ್ಟಿ |
|---|---|
| 11) ಮಲೇರಿಯಾ | a) ಆಹಾರ ಮತ್ತು ನೀರು |
| 12) ಧನುರ್ವಾಯು | b) ಸಂಪರ್ಕದಿಂದ |
| 13) ಕಾಲರಾ | c) ಸೊಳ್ಳೆಯ ಕಡಿತ |
| 14) ಕ್ಷಯ | d) ಗಾಳಿ |
| | e) ಧೂಳು ಗಾಯದಲ್ಲಿ ಸೇರಿದಾಗ |

IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **10×1=10**

15) ಸಂಬಳದ ಉದ್ಯೋಗಿ ಎಂದರೆ ಯಾರು?

16) ಥೈರಾಯಿಡ್ ಗ್ರಂಥಿ ಸರಿಯಾಗಿ ಕೆಲಸ ಮಾಡಲು ಯಾವ ಖನಿಜಾಂಶ ಅಗತ್ಯವಾಗಿದೆ.

17) ರಕ್ಷಣಾ ಪದಾರ್ಥಗಳು ಎಂದರೇನು?

18) ಬಟ್ಟೆ ಎಂದರೇನು?

19) ಸೋಂಕು ರೋಗವೆಂದರೇನು?

20) ಹದಿಹರೆಯದ ಅವಧಿ ಎಂದರೇನು?

21) ಶಕ್ತಿಯ ಉಳಿತಾಯ ಹೇಗೆ ಆಗುತ್ತದೆ?

22) ಉಳಿತಾಯ ಎಂದರೇನು?

23) ಗ್ರಾಹಕರೆಂದರೆ ಯಾರು?

24) ಕುಟುಂಬ ಎಂದರೇನು?

V. **ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8×2=16**

25) ಗೃಹ ವಿಜ್ಞಾನ ಕ್ಷೇತ್ರದಲ್ಲಿ ಮನೆಯಲ್ಲೇ ಮಾಡುವ ಸ್ವಂತ ಉದ್ಯೋಗದಲ್ಲಿ ಯಾವುದಾದರೂ ನಾಲ್ಕು ಅಂಶಗಳನ್ನು ಉದಾಹರಣೆಯಾಗಿ ಕೊಡಿ.

26) ಆಹಾರ, ಅಂಗಾಂಶಗಳ ಬೆಳವಣಿಗೆ ಮತ್ತು ನಶಿಸಿ ಹೋದ ಜೀವಕೋಶಗಳ ದುರಸ್ತಿಗೆ ಹೇಗೆ ಸಹಾಯಕವಾಗಿದೆ?

27) ಆಹಾರದ 4 ಪ್ರಮುಖ ಘಟಕಗಳನ್ನು ಬರೆಯಿರಿ.

28) ಆಹಾರವನ್ನು ಏಕೆ ಬೇಯಿಸಬೇಕು?

29) ಹಣ್ಣು ಮತ್ತು ತರಕಾರಿಗಳನ್ನು ಘನೀಕರಿಸುವಾಗ ಅನುಸರಿಸಬೇಕಾದ ಯಾವುದಾದರೂ ಎರಡು ಎಚ್ಚರಿಕೆಗಳು ಯಾವುವು?

30) ನಿರ್ವಹಣೆಯ ವಿವಿಧ ಹಂತಗಳಾವುವು?

31) ಸಿದ್ಧ ಉಡುಪಗಳ ಎರಡು ಅನುಕೂಲಗಳು ಮತ್ತು ಎರಡು ಅನಾನುಕೂಲಗಳನ್ನು ಬರೆಯಿರಿ.

32) ಕಲಬೆರಕೆ ವಸ್ತುಗಳೆಂದರೇನು? ಹಾಲು ಮತ್ತು ತುಪ್ಪದೊಂದಿಗೆ ಕಲಬೆರಕೆ ಮಾಡಬಹುದಾದ ಪದಾರ್ಥಗಳು ಯಾವುವು?

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10×3=30**

33) ಶರ್ಕರ ಪಿಷ್ಟಗಳ ಕಾರ್ಯಗಳೇನು?

34) ಹುದುಗುವಿಕೆಯಿಂದಾಗುವ ಅನುಕೂಲಗಳೇನು?

35) ಉಷ್ಣತೆಯನ್ನು ಹೇಗೆ ಕಡಿಮೆ ಮಾಡಬಹುದು?

36) ಬಟ್ಟೆಯನ್ನು ನೇಯಲು ಸಾಮಾನ್ಯವಾಗಿ ಬಳಸುವ ನೇಯ್ಗೆಗಳು ಯಾವುವು?

37) ಕಾಡು ನಾಶವಾಗುವುದರ ಪರಿಣಾಮಗಳೇನು?

38) ವಿಭಕ್ತ ಕುಟುಂಬಗಳ ಅನುಕೂಲಗಳಾವುವು?

39) ಭಾಷಾ ಬೆಳವಣಿಗೆಯ ಹಂತಗಳಾವುವು?

40) ಬೇರೆಯವರಿಗೆ ಜವಾಬ್ದಾರಿ ಹೊರಿಸುವಾಗ ಗಮನಿಸಬೇಕಾದ ಅಂಶಗಳೇನು?

41) 'ಉಸಿರು ಕಟ್ಟುವಿಕೆ' ಮತ್ತು 'ಉಸಿರಾಡಲು ತೊಂದರೆ' ಅಪಘಾತಗಳು ಹೇಗೆ ಸಂಭವಿಸುತ್ತವೆ.

42) ಕಾಳಸಂತೆ ವ್ಯಾಪಾರ ಸಂದರ್ಭದಲ್ಲಿ ಗ್ರಾಹಕರು ಅನುಸರಿಸಬೇಕಾದ ಪರ್ಯಾಯ ಮಾರ್ಗಗಳು ಯಾವುವು?

**VII. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಏಳು ಅಥವಾ ಎಂಟು ವಾಕ್ಯದಲ್ಲಿ ಉತ್ತರ ಬರೆಯಿರಿ.** **5×4=20**

43) ಜೀವ ಸತ್ವಗಳನ್ನು [ಅನ್ನಾಂಗಗಳು] ಎಷ್ಟು ಗುಂಪುಗಳಾಗಿ ವರ್ಗೀಕರಿಸಲಾಗಿದೆ? ಅವು ಯಾವುವು? ಪ್ರತಿಯೊಂದು ಜೀವಸತ್ವಗಳ ನ್ಯೂನತೆಯಿಂದುಂಟಾಗುವ ರೋಗಗಳನ್ನು ಹೆಸರಿಸಿ.

44) ಬಟ್ಟೆಯಲ್ಲಿರುವ ಕಲೆಗಳನ್ನು ತೆಗೆಯುವ ಮೊದಲು ವಹಿಸಬೇಕಾದ ಮುಂಜಾಗ್ರತ ಕ್ರಮಗಳು ಅಥವಾ ನಿಯಮಗಳನ್ನು ಬರೆಯಿರಿ?

45) ವೃದ್ಧರನ್ನು ಹೇಗೆ ನೋಡಿಕೊಳ್ಳುವಿರಿ?

46) ಸಂಪನ್ಮೂಲಗಳ ಬಳಕೆಯ ಮಾರ್ಗಸೂಚಿಗಳಾವುವು?

47) ಸಮಯದ ಯೋಜನೆಯನ್ನು ಯಾವ ರೀತಿ ಮಾಡುವುದು?

**VIII. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **2×5=10**

48) ಗ್ರಾಹಕರ ಸಂಘಗಳ ಉಪಯೋಗಗಳನ್ನು ಬರೆಯಿರಿ.

49) ಅರಣ್ಯಗಳಿಂದಾಗುವ ಅನುಕೂಲಗಳನ್ನು ಬರೆಯಿರಿ.

DO NOT WRITE ANYTHING HERE